1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.94/2015

ದಿಃ 25.07.2025

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-4 Pw-13

| | | |
|---|---|---|
| ಹೆಸರು | ಃ | ಬೆಟ್ಟಸ್ವಾಮಿಗೌಡ |
| ತಂದೆಯ ಹೆಸರು | ಃ | ವೆಂಕಟರಾಮಯ್ಯ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ನೆರಗನಹಳ್ಳಿ, ತುಮಕೂರು ಜಿಲ್ಲೆ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಕೆಲವು ವರ್ಷಗಳ ಹಿಂದೆ ಒಂದು ಶುಕ್ರವಾರ ಸಂತೆಗೆ ಮಾಗಡಿಗೆ ಬಂದಾಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲಾತಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ನಿ.ಪಿ.5ರಲ್ಲಿರುವಂತಹ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿ.ಪಿ.5(ಸಿ) ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ. ನ್ಯಾಯಾಲಯದ ಮುಂದಿರುವಂತಹ 2ನೇ ಆರೋಪಿಯ ಜೊತೆ ಪೊಲೀಸರು ನನ್ನನ್ನು ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ. ಸಾಕ್ಷಿ ನಿ.ಪಿ.6ರಲ್ಲಿರುವಂತಹ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ

ಸಹಿಯನ್ನು ನಿ.ಪಿ.6(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯಲ್ಲಿ ಬರೆದಿರುವ ವಿಚಾರ ಸಹ ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿಃ06.09.2024ರಂದು ಪೊಲೀಸರು ನನ್ನನ್ನು ಮಾಗಡಿ ಠಾಣೆಗೆ ಕರೆಸಿಕೊಂಡಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿ 2 ಪೊಲೀಸರಿಗೆ ಚಾಸಾ.1ಕ್ಕೆ ಶಸ್ತ್ರಚಿಕಿತ್ಸೆ ನಂತರ ಇರಿಸಿಕೊಂಡಂತಹ ಜಾಗ ಹಾಗೂ ಆತನನ್ನು ಅಪಹರಿಸಿದ ಜಾಗ ತೋರಿಸುತ್ತೇನೆ ಎಂದು ಹೇಳಿದರ ಮೇರೆಗೆ ಆಕೆ ತೋರಿಸಿದಂತಹ ಜಾಗಕ್ಕೆ ನಾನು ಪೊಲೀಸರ ಜೊತೆಗೆ ಹೋಗಿದ್ದು ಸದರಿ ಸ್ಥಳದಲ್ಲಿ ಬರೆದಂತ ನಿ.ಪಿ.5 ಮತ್ತು 6ರ ಮಹಜರ್ ಗೆ ನಾನು ಸದರಿ ಸ್ಥಳಗಳಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ಥಳಗಳಲ್ಲಿ ಸಹಿ ಮಾಡಿದ್ದರೂ ಸಹ ಈಗ ಮಾಗಡಿ ಸಂತೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಎಂ.ಎನ್.ಪಿ., ಎ.ಬಿ.ಪಿ. ಬಿ.ಎಸ್.ಎಂ., ಕೆ.ಸಿ.ಎಂ., ವಕೀಲರಿಂದ 3ರಿಂದ 11ನೇ ಆರೋಪಿಗಳ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ. ಕೆ.ಜೆ.ಜಿ, ವಕೀಲರಿಂದ 1 ಮತ್ತು 2ನೇ ಆರೋಪಿಗಳ ಪರವಾಗಿಃ</u>

ವಕೀಲರನ್ನು ಕೂಗಿಸಲಾಯಿತು. ನ್ಯಾಯಾಲಯದಲ್ಲಿ ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.